REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 । ಸಂಚಿಕೆ : 13 । ಜುಲೈ 6, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ದಿನಾಂಕ : 23-06-2022ರಂದು ನವದೆಹಲಿ

## ನ್ಯಾಪಕಬ್‌ನಿಂದ ಪಟ್ಟಣ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಸಮಾವೇಶ



**ನವದೆಹಲಿ :** ದಿನಾಂಕ : 23.06.2022ರಂದು ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮತ್ತು ಪತ್ತಿನ ಸಂಘಗಳ (NAFCUB) ಮಹಾಮಂಡಳವು ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಸಮಾವೇಶವನ್ನು ಕೇಂದ್ರದ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್‌ಶಾರವರು ಉದ್ಘಾಟಿಸಿ ಮಾತನಾಡುತ್ತಾ ಸಹಕಾರವು ಭಾರತೀಯರಲ್ಲಿ ರಕ್ತಗತವಾಗಿದೆ. ಆದ್ದರಿಂದ ಭಾರತದಲ್ಲಿ ಸಹಕಾರ ಚಳುವಳಿ ಎಂದಿಗೂ ಪ್ರಸ್ತುತ. ನಮ್ಮ ದೇಶವನ್ನು ಅನೇಕ ಬಿಕ್ಕಟ್ಟುಗಳಿಂದ ಹೊರತರುವಲ್ಲಿ ಸಹಕಾರಿ ಆಂದೋಲನವು ಕೊಡುಗೆ ನೀಡಿದೆ. ಸಹಕಾರ ಸಚಿವಾಲಯವನ್ನು ಬಲಪಡಿಸಲು, ಪಾರದರ್ಶಕತೆಯನ್ನು ತರಲು, ಆಧುನೀಕರಣಗೊಳಿಸಲು, ಗಣಕೀಕರಣಗೊಳಿಸಲು ಮತ್ತು ಸ್ಪರ್ಧಾತ್ಮಕ ಸಹಕಾರಿ ಸಂಘಗಳನ್ನು ರಚಿಸಲು ರಚಿಸಲಾಗಿದೆ. ನಮ್ಮ ಯಶಸ್ಸು ನಾಲ್ಕು ಅಂಶಗಳ ಮೇಲೆ ಅವಲಂಬಿತವಾಗಿದೆ. ಸಂಕಲ್ಪ, ಆತ್ಮಸಾಕ್ಷಿ, ಕಠಿಣ ಪರಿಶ್ರಮ ಮತ್ತು ಸಂಘಟಿತ ಮನೋಭಾವ.

ದೇಶದಲ್ಲಿ 1540 ಪಟ್ಟಣ ಸಹಕಾರ ಬ್ಯಾಂಕುಗಳಿದ್ದು, ಅವುಗಳಲ್ಲಿ 190ಕ್ಕೂ ಹೆಚ್ಚು ಪಟ್ಟಣ ಸಹಕಾರ ಬ್ಯಾಂಕುಗಳು 100 ವರ್ಷಗಳನ್ನು ಪೂರ್ಣಗೊಳಿಸಿವೆ ಮತ್ತು ಮುಂದಿನ 100 ವರ್ಷಗಳ ಪ್ರಯಾಣಕ್ಕೆ ಸಿದ್ಧರಾಗುತ್ತಿವೆ. ಇವುಗಳಲ್ಲಿ ಕೆಲವು ದೊಡ್ಡ ಬ್ಯಾಂಕ್‌ಗಳಾಗಿ ಬೆಳೆದಿವೆ ಮತ್ತು ರಾಷ್ಟ್ರೀಯ ಬ್ಯಾಂಕುಗಳಿಗೆ ಸರಿಸಮನಾದ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿವೆ. ಇತರ ಹಲವು ಬ್ಯಾಂಕುಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಅವುಗಳು ಕಾರ್ಯನಿರ್ವಹಿಸುವ ಪ್ರದೇಶದ ಜನರಿಗೆ ವಿಶ್ವಾಸಾರ್ಹ ಆರ್ಥಿಕ ಶಕ್ತಿ ಕೇಂದ್ರಗಳಾಗಿವೆ. ರಾಷ್ಟ್ರೀಕೃತ ಬ್ಯಾಂಕುಗಳ ತೀವ್ರ ಪೈಪೋಟಿಯ ನಡುವೆಯೂ ಸಹಕಾರಿ ಧ್ವಜವನ್ನು ಹಾರಿಸುವುದಕ್ಕಾಗಿ ಪ್ರತಿಯೊಬ್ಬರನ್ನು ಶ್ಲಾಘಿಸುವ ಅವಕಾಶವನ್ನು ನಾವು ಬಳಸಿಕೊಳ್ಳೋಣ. ಪಟ್ಟಣ ಸಹಕಾರ ಬ್ಯಾಂಕುಗಳ ಮುಂದಿನ ಹೊಣೆಗಾರಿಕೆ ಬಗ್ಗೆ ವಿವರಿಸುವುದರೊಂದಿಗೆ ಬ್ಯಾಂಕಿಂಗ್ ರೆಗ್ಯುಲೇಷನ್ ಆಕ್ಟ್‌ನ ತಿದ್ದುಪಡಿಯಿಂದಾಗಿ ಸಹಕಾರಿ ಬ್ಯಾಂಕುಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು.

ಮುಖ್ಯಅತಿಥಿಗಳಾಗಿ ಕೇಂದ್ರದ ಸಹಕಾರ ರಾಜ್ಯ ಸಚಿವರಾದ ಶ್ರೀ ಬಿ.ಎಲ್. ವರ್ಮಾ, ಕೇಂದ್ರದ ವಿತ್ತ ರಾಜ್ಯ ಸಚಿವರಾದ ಡಾ॥ ಭಾಗ್ವತ್ ಕೆ. ಕರಾಡ, ವಿಶೇಷ ಅತಿಥಿಗಳಾಗಿ ಶ್ರೀ ಎನ್‌ಸಿಯುಐ, ಅಧ್ಯಕ್ಷರಾದ ಶ್ರೀ ದಿಲಿಪ ಸಂಘಾನಿ, ಆರ್‌ಬಿಐ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆ, ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾ, ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ರುದ್ರೇಗೌಡ, ಶ್ರೀ ಅಶೋಕ ಎಂ. ಮನಗೂಳಿ, ಶ್ರೀ ಹೆಚ್.ಸಿ. ಕೃಷ್ಣ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಭಾಗವಹಿಸಿದ್ದರು.

2 ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ
5 ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕ್ : 50ನೇ ವಾರ್ಷಿಕ ಮಹಾಸಭೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ



## ಅತ್ಮೀಯ ಸಹಕಾರಿಗಳೇ...

### ಸರಕು ಮತ್ತು ಸೇವಾ ತೆರಿಗೆಗೆ ಐದು ವರ್ಷ: ದೇಶಕ್ಕಾಗಲಿ, ಜನರಿಗಾಗಲಿ ಏನಾದರೂ ಉಪಯೋಗವಾಗಿದೆಯೇ?

ಸ್ವಾತಂತ್ರ್ಯೋತ್ತರದಲ್ಲಿ ದೇಶ ಅತಿದೊಡ್ಡ ತೆರಿಗೆ ಸುಧಾರಣಾ ವ್ಯವಸ್ಥೆಗೆ ತೆರೆದುಕೊಂಡಿದೆ. ಒಂದು ದೇಶ–ಒಂದೇ ತೆರಿಗೆ ವ್ಯವಸ್ಥೆಯು ದೇಶದ ಆರ್ಥಿಕತೆ ಮತ್ತಷ್ಟು ಸದೃಢಗೊಳ್ಳಲಿದೆ. ಹೊಸ ತೆರಿಗೆ ಜಾರಿಯಿಂದ ಜಿಡಿಪಿಯು ಶೇ.1.5ರಿಂದ ಶೇ.2ರಷ್ಟು ಹೆಚ್ಚಾಗುವ ಅಂದಾಜಿದೆ. ಉತ್ಪಾದಕರಿಗೂ, ಗ್ರಾಹಕರಿಗೂ ಇದರಿಂದ ಲಾಭವಾಗಲಿದೆ ಎಂದು ಕೇಂದ್ರ ಸರ್ಕಾರ ಹೆಮ್ಮೆಯಿಂದ ಜಾರಿಗೆ ತಂದ ಸರಕು ಮತ್ತು ಸೇವಾ ತೆರಿಗೆ ಅಂದರೆ ಜಿಎಸ್‌ಟಿ ವ್ಯವಸ್ಥೆಗೆ ಐದು ವರ್ಷಗಳಾಗಿವೆ.

ನಾನು ಗಮನಿಸಿದ ಹಾಗೆ, ನಮ್ಮ ದೇಶದ ಆರ್ಥಿಕತೆಯಲ್ಲಿ ಸೇವಾ ವಲಯದ ಪಾಲು ಶೇ.57ರಷ್ಟಿರುವಾಗ ತೆರಿಗೆ ದರ ಹೆಚ್ಚಳದಿಂದ 130 ಕೋಟಿ ಜನಸಂಖ್ಯೆಯಿರುವ ದೇಶದಲ್ಲಿ ಸರ್ಕಾರದ ನಿರೀಕ್ಷೆಯಾದ ರೂ.150 ಲಕ್ಷ ಕೋಟಿಗೂ ಹೆಚ್ಚು ಆದಾಯಗಳಿಸಿದ್ದರೆ, ಜನಸಾಮಾನ್ಯರ ಮೇಲೆ ವಾರ್ಷಿಕ ತೆರಿಗೆ ವಿಧಿಸಬೇಕು. ಮೊದಲೇ ನಾನಾ ಸಂಕಷ್ಟದಿಂದ ಹೈರಾಣಗಿರುವ ಜನರ ಮೇಲೆ ಕಳೆದ ಐದು ವರ್ಷದಿಂದ ವರ್ಷಕ್ಕೆ ತೆರಿಗೆ ಹೆಚ್ಚಳದ ಬರೆ ಬಿದ್ದು ನರಳುವಂತಾಗಿದೆ.

ಇದು ಒಂದಾದರೆ, ಜಿಎಸ್‌ಟಿ ಜಾರಿಯಿಂದ ರಾಜ್ಯಗಳ ತೆರಿಗೆ ಆದಾಯ ಹೆಚ್ಚಳವಾಗಲಿದೆ ಎಂದೇ ಹೇಳಲಾಗಿತ್ತು. ಆದರೆ, ರಾಜ್ಯಗಳ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿರುವ ಯಾವುದೇ ಸುಳಿವು ಇಲ್ಲವೆಂದು ಇಂಡಿಯಾ ರೇಟಿಂಗ್ಸ್ ಸಂಸ್ಥೆಯ ವರದಿಯೇ ಹೇಳುತ್ತಿದೆ. ಇದರ ಫಲವಾಗಿ, ರಾಜ್ಯಗಳು ಜಿಎಸ್‌ಟಿ ಪರಿಹಾರವನ್ನು ಮತ್ತೂ ಕೆಲ ವರ್ಷಗಳ ಕಾಲ ವಿಸ್ತರಿಸುವಂತೆ ಒತ್ತಾಯಿಸುತ್ತಿವೆ.

ಇನ್ನೊಂದು, ಅನೇಕರು ಜಿಎಸ್‌ಟಿ ತೆರಿಗೆ ಪಾವತಿಯಲ್ಲಿನ ಇರುವ ತಾಂತ್ರಿಕ ದೋಷಗಳು, ಮರುಪಾವತಿಯಲ್ಲಿ ವಿಳಂಬಗಳು ಇತ್ಯಾದಿ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅಲ್ಲದೆ ಕಳೆದ 5 ವರ್ಷಗಳಲ್ಲಿ ತೆರಿಗೆ ದರಗಳು ಪದೆ ಪದೇ ಬದಲಾವಣೆಯಾಗಿರುವುದರಿಂದ ಉತ್ಪಾದನಾ ವಲಯ ಸೇರಿದಂತೆ ಇತರ ಎಲ್ಲಾ ವಲಯಗಳ ಮೇಲೂ ಪ್ರತಿಕೂಲ ಪರಿಣಾಮ ಬೀರಿರುವುದು ಕಾಣುತ್ತಿದ್ದೇವೆ.

ಮತ್ತೊಂದೆಡೆ, ಈ ತೆರಿಗೆ ಜಾರಿಯಾದ ದಿನದಿಂದ ಸೇವಾ ವಲಯ ತತ್ತರಿಸಿ ಹೋಗಿದೆ, ಜನಸಾಮಾನ್ಯರು ಉಣ್ಣುವ ಅನ್ನದಿಂದ ಕುಡಿಯುವ ಕಾಫಿ, ಚಹಾಗೂ ತೆರಿಗೆ ತೆತ್ತು ತೆತ್ತು ಬಸವಳಿದು ಹೋಗುತ್ತಿದ್ದಾರೆ.

ಇತ್ತೀಚಿನ ಜಿಎಸ್‌ಟಿ ಮಂಡಳಿಯ ಶಿಫಾರಸ್ಸಿನಂತೆ, ಪ್ಯಾಕ್ ಆಗಿರುವ ಆಹಾರ ಪದಾರ್ಥಗಳು, ಮೊಸರು, ಪನ್ನೀರ್, ಜೇನುತುಪ್ಪ, ಬೆಲ್ಲ, ಮಂಡಕ್ಕಿ, ಸಾವಯವ ಗೊಬ್ಬರ, ಮಾತ್ರವಲ್ಲ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಅಟ್ಲಾಸ್, ನಕಾಸೆಗಳು ಸೇರಿ ಇನ್ನು ಅನೇಕ ವಸ್ತುಗಳು ಶೇ.5ರಷ್ಟು ತೆರಿಗೆ ವ್ಯಾಪ್ತಿಗೆ ಬರಲಿವೆ. ಸಾಲದೆಂಬಂತೆ ಬ್ಯಾಂಕುಗಳು ನೀಡುವ ಚೆಕ್ ಪುಸ್ತಕದ ಮೇಲೆ ಶೇ.18ರಷ್ಟು ತೆರಿಗೆಯ ಬರೆ ಬೀಳಲಿದೆ ಎಂದರೆ ವಿವೇಕವಿದೆಯೇ ಎಂದು ಪ್ರಶ್ನಿಸಬೇಕಾಗಿದೆ.

ಏನೇ ಇರಲಿ, ಕೇಂದ್ರ ಸರ್ಕಾರ ತಾನು ಜಾರಿಗೆ ತಂದ ತೆರಿಗೆ ವ್ಯವಸ್ಥೆಯಿಂದ ದೇಶಕ್ಕಾಗಲಿ, ಜನರಿಗಾಗಲಿ ಕಳೆದ ಐದು ವರ್ಷಗಳಲ್ಲಿ ಏನಾದರೂ ಉಪಯೋಗವಾಗಿದೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಆಶಿಸುತ್ತೇನೆ.

ಎಚ್.ಕೆ. ಪಾಟೀಲ
ಅಧ್ಯಕ್ಷರು

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme) ಯನ್ನು ಏರ್ಪಡಿಸಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ 2ನೇ ಬ್ಯಾಚ್ ತರಬೇತಿಯನ್ನು ದಿನಾಂಕ : 25.07.2022 ರಂದು ಬೆಳಿಗ್ಗೆ 09.00 ಗಂಟೆಯಿಂದ ದಿನಾಂಕ : 29.07.2022ರ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರದಲ್ಲಿ ಊಟ–ತಿಂಡಿ, ವಸತಿ ಸೌಕರ್ಯ ಮತ್ತು ಉಪನ್ಯಾಸಕರ ವ್ಯವಸ್ಥೆ, ಹಿನ್ನೆಲೆಯ ಪತ್ರ, ತರಬೇತಿ ಪ್ರಮಾಣಪತ್ರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಈ ಸದರಿ ತರಬೇತಿ ಶಿಬಿರಕ್ಕೆ ಪ್ರತಿನಿಧಿ ಶುಲ್ಕ ನಿಗದಿಪಡಿಸಲಾಗಿದೆ. ಪ್ರತಿ ಪ್ರತಿನಿಧಿಗೆ ರೂ.5,000/–ಗಳು ಮತ್ತು ಜಿಎಸ್‌ಟಿ ತೆರಿಗೆ 18% ಸೇರಿಸಿ ಒಟ್ಟು ರೂ.5,900/–ಗಳನ್ನು ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಚೆಕ್/ಡಿಡಿ ಅಥವಾ ಎನ್‌ಇಫ್‌ಟಿ ಮುಖಾಂತರ ದಿನಾಂಕ : 15.07.2022 ರೊಳಗಾಗಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಅಧಿಕಾರಿ ವರ್ಗದವರಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ. ಮಹಾಮಂಡಳದಲ್ಲಿ ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ. ಈ ತರಬೇತಿ ಶಿಬಿರದಲ್ಲಿ ಸದರಿ ತರಬೇತಿಗೆ ನೋಂದಾಯಿಸಿದ ಪ್ರತಿನಿಧಿಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರ ಯವರು ತಿಳಿಸಿರುತ್ತಾರೆ.

## 100 ವರ್ಷ ಪೂರೈಸಿದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನವದೆಹಲಿಯಲ್ಲಿ ಜರುಗಿದ "ನ್ಯಾಷನಲ್ ಕಾನಕ್ಲೇವ್"ನಲ್ಲಿ ನ್ಯಾಫಕಬ್‌ನಿಂದ ಸನ್ಮಾನಿಸಲಾಯಿತು. ಸನ್ಮಾನಿತ ಕರ್ನಾಟಕದ ಪಟ್ಟಣ ಸಹಕಾರ ಬ್ಯಾಂಕುಗಳ ಛಾಯಾಚಿತ್ರಗಳು




























Thursday, June 23, 2022
बृहस्पतिवार, जून 23, 2022




## ಶತಮಾನ ಪೂರೈಸಿ ಸನ್ಮಾನಿತಗೊಂಡ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು

ದಿ ಬೆಂಗಳೂರು ಸಿಟಿ ಕೋ–ಆಪ್. ಬ್ಯಾಂಕ್ ಲಿ., ಬೆಂಗಳೂರು, ಬೆಳಗಾವಿ ಪಯೋನಿರ್ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಬೆಳಗಾವಿ, ಹುಬ್ಬಳ್ಳಿ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಹುಬ್ಬಳ್ಳಿ, ಬಿಜಾಪುರ ಜಿಲ್ಲಾ ಸರ್ಕಾರಿ ಅಧಿಕಾರಿಗಳ ಕೋ–ಆಪ್. ಬ್ಯಾಂಕ್ ಲಿ., ಕಲ್ಪವೃಕ್ಷ ಕೋ–ಆಪ್. ಬ್ಯಾಂಕ್ ಲಿ., ಚಿಕ್ಕನಾಯಕನಹಳ್ಳಿ, ದಿ ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್ ಲಿ., ಉಡುಪಿ, ಸಿಟಿ ಕೋ–ಆಪ್. ಬ್ಯಾಂಕ್ ಲಿ., ಶಿವಮೊಗ್ಗ, ಶ್ರೀ ಬಸವೇಶ್ವರ ಕೋ–ಆಪ್. ಬ್ಯಾಂಕ್ ಲಿ., ಬಾಗಲಕೋಟೆ, ಲಕ್ಷ್ಮಿ ಸಹಕಾರ ಬ್ಯಾಂಕ್ ಲಿ., ಗುಳೇದಗುಡ್ಡ, ಲಕ್ಷ್ಮೀ ಸಹಕಾರಿ ಬ್ಯಾಂಕ್ ಲಿ., ಗಜೇಂದ್ರಗಡ, ಗದಗ ಜಿಲ್ಲೆ, ಅಂಕೋಲಾ ಅರ್ಬನ್ ಕೋ. ಆಪ್ ಬ್ಯಾಂಕ್, ಅಂಕೋಲಾ, ಕುಮಟಾ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಶ್ರೀ ವಾಸವಾಂಬ ಕೋ–ಆಪ್. ಬ್ಯಾಂಕ್ ಲಿ., ಹೊಳೆನರಸೀಪುರ, ರಡ್ಡಿ ಕೋ–ಆಪ್. ಬ್ಯಾಂಕ್ ಲಿ., ಧಾರವಾಡ, ಶ್ರೀ ಗಣಪತಿ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಸಾಗರ, ಟೀಚರ್ಸ್ ಕೋ–ಆಪ್. ಬ್ಯಾಂಕ್ ಲಿ., ಉಡುಪಿ, ಮಂಗಳೂರು ಟೌನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಮಂಗಳೂರು., ಮಲ್ಲೇಶ್ವರಂ ಕೋ–ಆಪ್. ಬ್ಯಾಂಕ್ ಲಿ., ಬೆಂಗಳೂರು, ಆರ್ಯವೈಶ್ಯ ಕೋ–ಆಪ್. ಬ್ಯಾಂಕ್ ಲಿ., ಹುಬ್ಬಳ್ಳಿ, ಶ್ರೀ ಕನ್ನಿಕಾಪರಮೇಶ್ವರಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಹಾಸನ, ಕರ್ನಾಟಕ ಕುರುಬರ ಕೋ–ಆಪರೇಟಿವ್ ಬ್ಯಾಂಕ್ ಲಿ., ಗದಗ, ಭಾವಸಾರ ಕ್ಷತ್ರೀಯ ಕೋ–ಆಪ್. ಬ್ಯಾಂಕ್ ಲಿ., ಬೆಂಗಳೂರು, ಬಳ್ಳಾರಿ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಬಳ್ಳಾರಿ, ಕಂಟ್ರೋಲರ್ಸ್ ಆಫೀಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು, ಹೊಸಪೇಟೆ ಸಿಟಿ ಕೋ–ಆಪ್. ಬ್ಯಾಂಕ್ ಲಿ., ಹೊಸಪೇಟೆ, ಪುತ್ತೂರು ಟೌನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಪುತ್ತೂರು., ಶ್ರೀ ಸಿದ್ದೇಶ್ವರ ಕೋ–ಆಪ್ ಬ್ಯಾಂಕ್ ಲಿ. ವಿಜಯಪುರ., ಶಿರಸಿ ಅರ್ಬನ್ ಕೋ–ಆಪ್. ಬ್ಯಾಂಕ್ ಲಿ., ಶಿರಸಿ, ಸೌತ್ ಕೆನರಾ ಸರ್ಕಾರಿ ಅಧಿಕಾರಿಗಳ ಕೋ–ಆಪ್. ಬ್ಯಾಂಕ್ ಲಿ., ಮಂಗಳೂರು.

## ಸಹಕಾರ ಬ್ಯಾಂಕುಗಳಿಂದಲೂ ನೇರ ನಗದು ವರ್ಗಾವಣೆ

**ಅಹಮದಾಬಾದ್ :** ಸಹಕಾರ ಬ್ಯಾಂಕಿನ ಗ್ರಾಹಕರಿಗೂ ಕೂಡ ಸರ್ಕಾರದ ಎಲ್ಲಾ ಕಲ್ಯಾಣ ಯೋಜನೆಗಳ ಲಾಭ ಸಿಗಲಿದೆ. ಇದಕ್ಕಾಗಿ, ಸಹಕಾರಿ ಬ್ಯಾಂಕುಗಳನ್ನು ನೇರ ಬ್ಯಾಂಕ್ ವರ್ಗಾವಣೆ (ಡಿಬಿಟಿ)ಯೊಂದಿಗೆ ಲಿಂಕ್ ಮಾಡಲಾಗುತ್ತಿದೆ. ಈ ಕುರಿತು ಕೇಂದ್ರ ಸಹಕಾರ ಅಮಿತ್ ಶಾ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮವನ್ನು ಉದ್ದೇಶಿಸಿ ತಿಳಿಸಿದ್ದಾರೆ.

ಪ್ರಸ್ತುತ, ಸರ್ಕಾರದ 52 ಸಚಿವಾಲಯಗಳು ನಡೆಸುತ್ತಿರುವ 300 ಯೋಜನೆಗಳ ಲಾಭವನ್ನು ಫಲಾನುಭವಿಗಳಿಗೆ ಡಿಬಿಟಿ ಮೂಲಕ ರವಾನಿಸಲಾಗುತ್ತಿದೆ. ಅಂದರೆ, ಈಗ ಈ ಎಲ್ಲಾ ಯೋಜನೆಗಳ ಪ್ರಯೋಜವನ್ನು ಸಹಕಾರ ಬ್ಯಾಂಕುಗಳ ಗ್ರಾಹಕರು ಪಡೆಯಲಿದ್ದಾರೆ. ದೇಶದ ಏಳಿಗೆ ಮತ್ತು ಆರ್ಥಿಕ ಉನ್ನತಿಯಲ್ಲಿ ಸಹಕಾರ ಕ್ಷೇತ್ರ ಪ್ರಮುಖ ಪಾತ್ರ ವಹಿಸಲಿದೆ. ಇದರಿಂದ ಸಹಕಾರಿ ಕ್ಷೇತ್ರವು ಬಲಗೊಳ್ಳಲಿದೆ ಎಂದು ಅಮಿತ್ ಶಾ ಹೇಳಿದ್ದಾರೆ.

## ಸಹಕಾರ ಸಂಘಗಳ ನಿಬಂಧಕರಾಗಿ ಡಾ. ಎಂ.ವಿ. ವೆಂಕಟೇಶ್ ಅಧಿಕಾರ ಸ್ವೀಕಾರ



ಡಾ. ಎಂ.ವಿ. ವೆಂಕಟೇಶ್ ರವರು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರಾಗಿ ಹೆಚ್ಚುವರಿ ಪ್ರಭಾರದಲ್ಲಿ ಅಧಿಕಾರ ಸ್ವೀಕರಿಸಿದ್ದಾರೆ.

## ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ : ಬೀಳ್ಕೊಡುಗೆ ಸಮಾರಂಭ

**ಬೆಂಗಳೂರು :** ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕಿನಲ್ಲಿ 37 ವರ್ಷ ಸೇವೆ ಸಲ್ಲಿಸಿದ ಶ್ರೀ ಡಿ. ಸಂಜೀವಣ್ಣ ರವರು ಇತ್ತೀಚೆಗೆ ಮುಖ್ಯಕಾರ್ಯನಿರ್ವಾಹಕರಾಗಿ ನಿವೃತ್ತಿಗೊಂಡ ಸಂದರ್ಭದಲ್ಲಿ ಬೀಳ್ಕೋಡುಗೆ ಸಮಾರಂಭವನ್ನು ಆಯೋಜಿಸಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೃ. ಅಶ್ವತ್ಥನಾರಾಯಣ ರವರು ಶ್ರೀ ಡಿ. ಸಂಜೀವಣ್ಣ ಹಾಗೂ ಶ್ರೀಮತಿ ಲಕ್ಷ್ಮೀ ದಂಪತಿಗಳನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕ್ : 50ನೇ ವಾರ್ಷಿಕ ಮಹಾಸಭೆ



ದಿ ದಾವಣಗೆರೆ ಹರಿಹರ ಅರ್ಬನ್ ಬ್ಯಾಂಕಿನ 50ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎ. ಮುರುಗೇಶ್ ರವರು ವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು. ಈ ಮಹಾಸಭೆಯಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ಶಿವಲಿಂಗಸ್ವಾಮಿ ರವರು ಭಾಗವಹಿಸಿದ್ದರು.

## 8ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್(ಡಿಯುಸಿಬಿಎಂ)ನ ಸಂಪರ್ಕ ತರಗತಿಗಳು ದಿನಾಂಕ : 23.07.2022 ಮತ್ತು 24.07.2022 ರಂದು ಜರುಗಲಿವೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ "ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್" ಕೋರ್ಸ್‌ನ್ನು ಈಗಾಗಲೇ ಪ್ರಾರಂಭಿಸಿರುತ್ತದೆ. ಸದರಿ ಕೋರ್ಸ್‌ಗೆ ಈಗಾಗಲೇ ತಾವು ಅಭ್ಯರ್ಥಿಯಾಗಿ ಪ್ರವೇಶ ಪಡೆದಿರುತ್ತೀರಿ.

ಸಂಪರ್ಕ (ಕಾಂಟ್ಯಾಕ್ಟ್ ಕ್ಲಾಸ್) ತರಗತಿಗಳು ಆರ್‌ಐಸಿಎಂ (ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು) ಬೆಂಗಳೂರು ಇವರು ದಿನಾಂಕ : 23.07.2022 & ದಿನಾಂಕ : 24.07.2022ರಂದು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 05.00 ಗಂಟೆಯವರೆಗೆ ಬೆಂಗಳೂರು, ಆರ್‌ಐಸಿಎಂ, ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–70 ಮತ್ತು ಬೆಳಗಾವಿಯ ಮಹಾಮಂಡಳದ ಕಛೇರಿ, ನಂ.ಸಿಎ–3, ಅಟೋನಗರ, (ಆರ್‌ಟಿಓ ಮೈದಾನದ ಹತ್ತಿರ), ಬೆಳಗಾವಿ–590015. ಈ ಕೇಂದ್ರಗಳಲ್ಲಿ ಸಂಪರ್ಕ ತರಗತಿಗಳು ಜರುಗಲಿವೆ. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಪರೀಕ್ಷಾ ಕೇಂದ್ರದಲ್ಲಿ ಸಂಪರ್ಕ ತರಗತಿಗಳಿಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು.

ಈಗಾಗಲೇ ತಮ್ಮ ಇ–ಮೇಲ್ ವಿಳಾಸಕ್ಕೆ ಸಂಪರ್ಕ ತರಗತಿ, ಲಿಖಿತ ಪರೀಕ್ಷೆಯ ಸ್ಥಳ, ವಿಷಯ, ವೇಳಾಪಟ್ಟಿಯನ್ನು ಕಳುಹಿಸಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬಹುದಾಗಿದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಗೃಹ ಅಥವಾ ಇತರ ಕಟ್ಟಡ ನಿರ್ಮಾಣಕ್ಕೆ ಸಾಲ ನೀಡಿದಾಗ ಕಟ್ಟಡದ ನಿರ್ಮಾಣ ಪೂರ್ಣವಾದ ನಂತರ ವಿಮೆ ಮಾಡಿಸುವ ಕ್ರಮ ನಡೆದು ಬಂದಿದೆ. ಇದಕ್ಕೆ ಲೆಕ್ಕಪರಿಶೋಧಕರಿಂದ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. ಆದರೆ, ಕಟ್ಟಡ ನಿರ್ಮಾಣ ಹಂತದಲ್ಲೇ ವಿಮೆ ಮಾಡಿಸಬೇಕೆಂಬ ಸಲಹೆ ಬಂದಿದೆ. ಈ ಬಗ್ಗೆ ನಿಮ್ಮ ಸಲಹೆ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಉತ್ತರ ಕನ್ನಡ ಜಿಲ್ಲೆ.**

**ಉತ್ತರ :** ಗೃಹ ನಿರ್ಮಾಣಕ್ಕಾಗಿ ನಿವೇಶನವನ್ನು ಕೊಳ್ಳಲು ಸಾಲ ನೀಡಿದ್ದಲ್ಲಿ ನಿವೇಶನದ ಮೇಲೆ ವಿಮೆ ಮಾಡಿಸುವ ಅಗತ್ಯವಿಲ್ಲ. ಆದರೆ, ಕಟ್ಟಡ ನಿರ್ಮಾಣಕ್ಕಾಗಿ ಸಾಲ ನೀಡಿದಾಗ ಕಟ್ಟಡ ನಿರ್ಮಾಣ ಒಂದು ಹಂತಕ್ಕೆ ಬಂದ ನಂತರ, ವಿಮೆ ಮಾಡಿಸುವ ಪದ್ಧತಿ ಬ್ಯಾಂಕುಗಳಲ್ಲಿ ಚಾಲ್ತಿಯಲ್ಲಿದೆ.

**02. ನಾವು ರೆಸಲೂಷನ್ ಫ್ರೇಮ್ ವರ್ಕ 1.0 ಅಡಿಯಲ್ಲಿ ಕೆಲವು ಸಾಲಗಳನ್ನು ಪುನರ್‌ರಚಿಸಿದ್ದೇವೆ ಮತ್ತು 10% ಅನುವು ಮಾಡಿದ್ದೇವೆ. ಈ ಕೆಳಗಿನ ಸಂದರ್ಭಗಳಲ್ಲಿ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳೇನು?**

1. ಪುನರ್‌ರಚಿಸಿದ ಸಾಲ ಸುಸ್ತಿಯಾದಾಗ.
2. ಪುನರ್‌ರಚಿಸಿದ ಸಾಲ ಸ್ಟ್ಯಾಂಡರ್ಡ್ ಆಗಿ ಮುಂದುವರೆದಾಗ.
3. ಕೆಲವು ಸಾಲಗಳು ಪೂರ್ತಿ ಮರುಪಾವತಿಯಾದಾಗ.

**– ಭಾವಸಾರ ಕ್ಷತ್ರೀಯ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ರೆಸಲೂಷನ್ ಫ್ರೇಮ್ ವರ್ಕ 1.0ರ ಅಡಿಯಲ್ಲಿ ಸಾಲಗಳನ್ನು ಪುನರ್ ರಚಿಸಿದಾಗ ಮಾಡಬೇಕಾದ ಅನುವು ಕೆಳಗಿನಂತಿರುತ್ತದೆ.

1. ಭಾರತೀಯ ರಿಜರ್ವ್ ಬ್ಯಾಂಕಿನ ಆಗಸ್ಟ್ 6, 2020ರ ಸುತ್ತೋಲೆಯ ಪ್ಯಾರಾ 47ರಲ್ಲಿ ವ್ಯಾಖ್ಯಾನಿಸಲಾದ ಸಾಲ ಸುಸ್ತಿಯಾದಲ್ಲಿ ಸಾಲ ಪುನರರಚಿತವಾಗಿಲ್ಲವೆಂದು ತಿಳಿದು ಮೂಲ ದಿನಾಂಕದಿಂದ ಸಾಲ ಸುಸ್ತಿಯಾಗಿದೆ ಎಂದು ತಿಳಿಯತಕ್ಕದ್ದು. ಮಾನಿಟರಿಂಗ್ ಅವಧಿಯ ನಂತರ ಖಾತೆಯು ಸುಸ್ತಿಯಾದಲ್ಲಿ ಹೊಸದಾಗಿ ಸಾಲ ಬಾಕಿಯಾದ 90ದಿನಗಳ ನಂತರ ಸಾಲ ಸುಸ್ತಿಯಾಗಿದೆ ಎಂದು ಭಾವಿಸತಕ್ಕದ್ದು. ಅದರಂತೆ ಸುಸ್ತಿ ಸಾಲಕ್ಕೆ ಅನುವು ಮಾಡಬೇಕು. ಈ ಪ್ಯಾಕೇಜ್ ಅಡಿಯಲ್ಲಿ ಮಾಡಲಾದ ಶೇ.10% ಅನುವಿನಲ್ಲಿ ಉಳಿದಿರುವ ಮೊತ್ತವನ್ನು ಇದಕ್ಕಾಗಿ ಬಳಸಿಕೊಳ್ಳಬಹುದು.

2. ಪುನರ್‌ರಚಿಸಿದ ಖಾತೆಯು ಸ್ಟ್ಯಾಂಡರ್ಡ್ ವರ್ಗದಲ್ಲಿ ಮುಂದುವರಿದರೆ ಮತ್ತು ಸಾಲಗಾರ ಕನಿಷ್ಠ 20%ರಷ್ಟು ಸಾಲ ಮರುಪಾವತಿ ಮಾಡಿದ್ದರೆ ಅರ್ಧದಷ್ಟು ಅನುವನ್ನು ಹಿಂದಕ್ಕೆ ಪಡೆಯಬಹುದು. ಶೇ.30ರಷ್ಟು ಪುನರ್‌ರಚಿತ ಸಾಲ ಮರುಪಾವತಿಯಾಗಿದ್ದರೆ ಉಳಿದರ್ಧ ಅನುವನ್ನು ಹಿಂದಕ್ಕೆ ಪಡೆಯಬಹುದು.

3. ಪುನರ್‌ರಚಿಸಿದ ಸಾಲ ಪೂರ್ತಿ ಮರುಪಾವತಿಯಾಗಿದ್ದರೆ, ಅದಕ್ಕಾಗಿ ಮಾಡಲಾದ ಅನುವನ್ನು ಹಿಂದಕ್ಕೆ ಪಡೆಯಬಹುದು.

## ಪ್ರತಿವರ್ಷ ಜುಲೈ 1 ರಂದು ಚಾರ್ಟೆಡ್ ಅಕೌಂಟೆಂಟ್ಸ್ ದಿನ




ಪ್ರತಿ ವರ್ಷ ಜುಲೈ 1ರಂದು ಚಾರ್ಟೆಡ್ ಅಕೌಂಟೆಂಟ್ಸ್ (CA Day) ದಿನ ಎಂದು ಆಚರಿಸಲಾಗುವುದು. ಇದರ ಉದ್ದೇಶ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಸಂಶೋಧನೆಗಳನ್ನು ಸ್ಮರಿಸುವುದಾಗಿದೆ. ಅದರಂತೆ ಜುಲೈ 1 ಅನ್ನು CA Day ಸಂಸ್ಥಾಪನಾ ದಿನ ಎಂದೂ ಕರೆಯಲಾಗುವುದು. ಭಾರತದಲ್ಲಿ ICAI ಮಾತ್ರ ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ಲೆಕ್ಕಪರಿಶೋಧನೆಯ ವೃತ್ತಿಗೆ ಪರವಾನಿಗೆ ನೀಡುವ ಮತ್ತು ನಿಯಂತ್ರಣ ಮಾಡುವ ಸಂಸ್ಥೆಯಾಗಿದೆ. ನ್ಯಾಷನಲ್ ಫೈನಾನ್ಷಿಯಲ್ ರಿಪೋರ್ಟಿಂಗ್ ಅಥಾರಿಟಿ (NFRA) ಸೇರಿದಂತೆ ಎಲ್ಲಾ ಹಣಕಾಸು ಮತ್ತು ಲೆಕ್ಕಪತ್ರ ಸಂಸ್ಥೆಗಳು ICAI ಶಿಫಾರಸು ಮಾಡಿದ ಮಾನದಂಡಗಳನ್ನು ಅಗತ್ಯವಾಗಿ ಅನುಸರಿಸಬೇಕಾಗಿದೆ. ಭಾರತ ಸ್ವತಂತ್ರವಾಗುವ ಮೊದಲು ಬ್ರಿಟಿಷ್ ಸರ್ಕಾರ ತನ್ನ ಕಂಪನಿಯ ಕಾಯಿದೆಯಂತೆ ಭಾರತದಲ್ಲಿ ಲೆಕ್ಕಪತ್ರಗಳನ್ನು ನಿಯಂತ್ರಿಸುತ್ತಿತ್ತು. ಇದಕ್ಕಾಗಿ ಆಡಿಟರ್‌ಗಳನ್ನು ನೇಮಿಸುತ್ತಿತ್ತು. ವರ್ಷ ಕಳೆದಂತೆ ಅವರಲ್ಲಿ ಅರ್ಹತೆಯ ವಿಷಯಕ್ಕೆ ಗೊಂದಲಗಳು ಕಾಣಿಸಿದವು.

ಭಾರತ ಸ್ವಾತಂತ್ರ ಪಡೆದ ನಂತರ 1948ರಲ್ಲಿ ತಜ್ಞರ ಸಮಿತಿಯು ದೇಶದ ಲೆಕ್ಕ ಪತ್ರಗಳನ್ನು ನಿರ್ವಹಿಸಲು ಪ್ರತ್ಯೇಕ ಸಂಸ್ಥೆಯ ಶಿಫಾರಸ್ಸು ಮಾಡಿತು. ಅದರಂತೆ ಭಾರತ ಸರ್ಕಾರ ಸಂಸತ್ತಿನಲ್ಲಿ ಶಿಫಾರಸ್ಸು ಮಾಡಿದ ಮಸೂದೆಯನ್ನು ಅಂಗೀಕರಿಸಿತು. ನಂತರ ಅದನ್ನು ದಿ ಇನ್ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ICAI) ಎಂದು ಹೆಸರಿಸಲಾಯಿತು.

**CA ದಿನದ ಮಹತ್ವ :** ನಮ್ಮ ದೇಶದ ಅಭಿವೃದ್ಧಿಯಲ್ಲಿ CA ಗಳ ಪಾತ್ರ ಬಹಳ ಮಹತ್ವದ್ದಾಗಿದೆ. ICAI ಭಾರತದಲ್ಲಿ ಲೆಕ್ಕಪತ್ರಗಳನ್ನು ನಿಯಂತ್ರಿಸುವ ಸಂಸ್ಥೆಯಾಗಿದೆ. ಅವರ ಕೆಲಸ ಅತ್ಯಂತ ಕಠಿಣ ಕೆಲಸವಾಗಿದೆ. ಅದಕ್ಕಾಗಿಯೇ ಅವರ ಪರಿಶ್ರಮವನ್ನು ಸ್ಮರಿಸುವ ಸಲುವಾಗಿ ಜುಲೈ 1 ಅನ್ನು CA ಡೇ ಅಥವಾ ICAI ಸಂಸ್ಥಾಪನಾ ದಿನ ಎಂದು ಆಚರಿಸಲಾಗುವುದು.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ರಾಜ್ಯದಲ್ಲಿ 438 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಆರಂಭಕ್ಕೆ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ನರ್ಸ್, ವೈದ್ಯರು ಹಾಗೂ ದ್ವಿತೀಯ ದರ್ಜೆಯ ಗುಮಾಸ್ತರ ಹುದ್ದೆಯನ್ನು ಸೃಷ್ಟಿ ಮಾಡಲು ಅನುಮತಿ ನೀಡಲಾಗಿದೆ.
- ಮರಗಳನ್ನು ಬೆಳೆಸಿ ವೃಕ್ಷ ಮಾತೆ ಎಂದು ಖ್ಯಾತಿ ಹೊಂದಿರುವ ಸಾಲು ಮರದ ತಿಮ್ಮಕ್ಕ ಅವರಿಗೆ ಪರಿಸರ ರಾಯಭಾರಿ ಗೌರವ ನೀಡಲಾಗಿದೆ.
- ಕೇರಳದ ಪಾಲಕ್ಕಾಡ್ನ ಕಾಲೇಜು ವಿದ್ಯಾರ್ಥಿನಿಯೊಬ್ಬಳು ನಾಯಿ ಕಚ್ಚಿದ ಬಳಿಕ ನಾಲ್ಕು ರೇಬೀಸ್ ಲಸಿಕೆಗಳನ್ನು ಪಡೆದುಕೊಂಡಿದ್ದರೂ, ಒಂದು ತಿಂಗಳ ನಂತರ ರೇಬೀಸ್‌ಗೆ ಬಲಿಯಾಗಿದ್ದಾಳೆ.
- ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯ ಕೆಲವೊಂದು ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದ್ದು, ವಿದೇಶದಲ್ಲಿ ನೆಲೆಸಿರುವ ಸಂಬಂಧಿಕರಿಂದ ಒಂದು ವರ್ಷದಲ್ಲಿ ರೂ. 10 ಲಕ್ಷ ರೂ.ವರೆಗೂ ಸ್ವೀಕರಿಸಲು ಭಾರತೀಯರಿಗೆ ಅವಕಾಶ ಮಾಡಿಕೊಡಲಾಗಿದೆ.
- ಬೆಂಗಳೂರಿನ ಆಕರ್ಷಣೆಗಳಲ್ಲಿ ಒಂದಾಗಿರುವ ಐತಿಹಾಸಿಕ ಕಬ್ಬನ್ ಪಾರ್ಕ್‌ನಲ್ಲಿ ಶೀಘ್ರದಲ್ಲೇ ಸುರಂಗ ಅಕ್ವೇರಿಯಂ ತಲೆ ಎತ್ತಲಿದೆ.
- ಚಿತ್ರದುರ್ಗದ ಚಳ್ಳಕೆರೆಯಲ್ಲಿರುವ ಏರೋನಾಟಿಕಲ್ ಟೆಸ್ಟ್ ರೇಂಜ್‌ನಿಂದ ಯಶಸ್ವಿಯಾಗಿ ಚಾಲಕ ರಹಿತ ವಿಮಾನವನ್ನು ಹಾರಾಟ ನಡೆಸಲಾಗಿದೆ ಎಂದು ಡಿಆರ್‌ಡಿಒ ಹೇಳಿದೆ.
- ಚಿಲಿಯಲ್ಲಿ ಉದ್ಯೋಗಿಯೊಬ್ಬರ ಖಾತೆಗೆ ರೂ. 43 ಸಾವಿರದ ಬದಲಿಗೆ ಬರೋಬ್ಬರಿ 1.42 ಕೋಟಿ ರೂಪಾಯಿ ಬಂದಿದ್ದು ಇದರಿಂದ ಖುಷಿಯಾದ ಆತ ಕಂಪನಿಗೆ ರಾಜಿನಾಮೆ ನೀಡಿ ನಾಪತ್ತೆಯಾಗಿದ್ದಾರೆ.
- ಭಾರತೀಯ ರೈಲು ಮತ್ತು ವಿಮಾನಗಳಿಗೆ ಇದೇ ಮೊದಲ ಬಾರಿ ಹಾಸನ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವತಿಯಿಂದ ನಂದಿನಿ ಗುಡ್‌ಲೈಫ್ ಸುವಾಸಿತ ಹಾಲು ಸರಬರಾಜು ಮಾಡುವುದನ್ನು ಆರಂಭಿಸಲಾಗಿದೆ.

## ಓ ದು ಗ ರ ಅ ನಿ ಸಿ ಕೆ . . .



**ನಮಗೆ ಹೆಮ್ಮೆ ಉಂಟುಮಾಡಿದೆ :** ದೇಶದಲ್ಲೇ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲ ಸಾಹೇಬರವರ ನೇತೃತ್ವದಲ್ಲಿ ಚೆನ್ನಾಗಿ ಕಾರ್ಯನಿರ್ವಹಿಸುತ್ತಿರುವ ನಮ್ಮ ಮಹಾಮಂಡಳದಷ್ಟು ಉತ್ತಮ ಮಹಾಮಂಡಳ ಎಲ್ಲಿಯೂ ಇಲ್ಲ ಎಂದು ರಿಜರ್ವ್ ಬ್ಯಾಂಕಿನ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ಅವರು ಹೇಳಿರುವುದು ನಮಗೆ ಹೆಮ್ಮೆ ಉಂಟುಮಾಡಿದೆ.

**▸▸ ಧನಂಜಯ ರೆಡ್ಡಿ, ಬೆಂಗಳೂರು**

**ಜಾಹೀರಾತು ಕಾಟ ತಪ್ಪುತ್ತದೆ :** ರಿಸರ್ವ್ ಬ್ಯಾಂಕ್ ಗ್ರಾಹಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಜುಲೈ 1ರಿಂದ ಕಾರ್ಡ್ ಟೋಕನೈಸೇಶನ್ ನಿಯಮಗಳನ್ನು ಜಾರಿ ಮಾಡಿರುವುದು ಉತ್ತಮ ಕಾರ್ಯ. ಇದರಿಂದ ಇನ್ನು ಮುಂದೆ ವ್ಯಾಪಾರಿಗಳು ತಮ್ಮ ಸರ್ವರ್‌ಗಳಲ್ಲಿ ನಮ್ಮ ಕಾರ್ಡ್ ಡೇಟಾ ಸಂಗ್ರಹಿಸಲಾಗುವುದಿಲ್ಲ. ಇದರಿಂದ ಅವರ ಇತರ ಉತ್ಪನ್ನಗಳ ಜಾಹೀರಾತು ಮಾಹಿತಿ ಕಾಟ ತಪ್ಪುತ್ತದೆ.

**▸▸ ಅರವಿಂದ ಸ್ವಾಮಿ, ಮೈಸೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.